ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	243(212)
2	ಸದಸ್ಯರ ಹೆಸರು	ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3	ಉತ್ತರಿಸುವ ದಿನಾಂಕ	04.03.2020
4	ಉತ್ತರಿಸುವ ಸಚಿವರು	ಕೃಷಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಬೀದರ್ ಜಿಲ್ಲೆಯಲ್ಲಿ ಹಿಂಗಾರು ಬೆಳೆ ಬಿತ್ತನೆ ಮಾಡಿರುವ ಜಮೀನುಗಳು ಎಷ್ಟು; (ಹೆಕ್ಟೇರ್ ವಾರು ವಿವರ ಒದಗಿಸುವುದು)	ಬೀದರ್ ಜಿಲ್ಲೆಯಲ್ಲಿ 2019-20ನೇ ಸಾಲಿನ ಹಿಂಗಾರು ಹಂಗಾಮಿನಲ್ಲಿ ಒಟ್ಟು- 103184 ಹೆ. ಜಮೀನಿನಲ್ಲಿ ಬಿತ್ತನೆ ಮಾಡಲಾಗಿದೆ. ತಾಲ್ಲೂಕುವಾರು ಒಟ್ಟು ಬಿತ್ತನೆ ಮಾಡಿರುವ ವಿವರಗಳು ಕೆಳಕಂಡಂತಿವೆ: ಬೀದರ್- 17975 ಹೆ. ಭಾಲ್ಕಿ-30098 ಹೆ. ಬಸವಕಲ್ಯಾಣ- 17290 ಹೆ. ಹುಮನಾಬಾದ-18839 ಹೆ. ಔರಾದ್- 18982 ಹೆ.
ಆ	ಜಿಲ್ಲೆಯಲ್ಲಿ ಬೆಳೆ ಹಾನಿಯಾಗಿರುವ ಬೆಳೆಗಳನ್ನು ಗುರುತಿಸಲಾಗಿದೆಯೇ; (ತಾಲ್ಲೂಕುವಾರು ವಿವರ ಒದಗಿಸುವುದು)	ಬೀದರ್ ಜಿಲ್ಲೆಯಲ್ಲಿ 2019-20ನೇ ಸಾಲಿನಲ್ಲಿ ಯಾವುದೇ ತಾಲ್ಲೂಕನ್ನು ಬರ ಅಥವಾ ನೆರೆ ಪೀಡಿತ ಪ್ರದೇಶವೆಂದು ಘೋಷಿಸಿಲ್ಲವಾದ್ದರಿಂದ ಹಾನಿಯಾಗಿರುವ ಬೆಳೆಗಳನ್ನು ಗುರುತಿಸಲಾಗಿರುವುದಿಲ್ಲ
ಇ	ಹಾನಿಯಾದ ಬೆಳೆಗೆ ಸೂಕ್ತ ಪರಿಹಾರ ನೀಡಲಾಗಿದೆಯೇ; ಈವರೆಗೆ ಎಷ್ಟು ಪರಿಹಾರ ನೀಡಲಾಗಿದೆ; (ತಾಲ್ಲೂಕುವಾರು ವಿವರ ಒದಗಿಸುವುದು)	ಬೀದರ್ ಜಿಲ್ಲೆಯಲ್ಲಿ 2019-20ನೇ ಸಾಲಿನಲ್ಲಿ ಯಾವುದೇ ತಾಲ್ಲೂಕನ್ನು ಬರ ಅಥವಾ ನೆರೆ ಪೀಡಿತ ಪ್ರದೇಶವೆಂದು ಘೋಷಿಸಿಲ್ಲವಾದ್ದರಿಂದ ಬೆಳೆ ನಷ್ಟ ಪರಿಹಾರವನ್ನು ನೀಡಲಾಗಿಲ್ಲ.

ಸಂ:AGRI-ACT/30/2020

(ಬಿ.ಸಿ.ಪಾಟೀಲ್) 2/3/2020

ಕೃಷಿ ಸಚಿವರು